KACN010003812026

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ

ದಿನಾಂಕ 23ನೇ ಮಾಹೆ ಮಾರ್ಚ 2026

ಉಪಸ್ಥಿತರುಃ ಶ್ರೀಮತಿ ಪ್ರಭಾವತಿ ಜಿ.
ಎಲ್ ಎಲ್ ಎಂ.
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ

ಕ್ರಿಮಿನಲ್ ಮಿಸ್ ನಂ. **122/2026**

ಅರ್ಜಿದಾರರುಃ ಪ್ರಕಾಶ್ @ ಜಿ.ಶಿವಪ್ರಕಾಶ್,
ಬಿನ್ ಹೆಚ್ ಎಸ್ ಗುರುಸ್ವಾಮಿ,
ವಯಸ್ಸು ಸುಮಾರು 55 ವರ್ಷ,
ವಾಸಃ ಹಂಗಳಪುರ ಗ್ರಾಮ,
ಗುಂಡ್ಲುಪೇಟೆ ತಾಲ್ಲೂಕು,
ಚಾಮರಾಜನಗರ.
(ಪರವಾಗಿ ಶ್ರೀ.ಗುರುಸ್ವಾಮಿ.ಪಿ, ವಕೀಲರು)

ವಿರುದ್ಧ

ಎದುರುದಾರರುಃ ಸರ್ಕಾರದ ಪರವಾಗಿ, ಗುಂಡ್ಲುಪೇಟೆ ಪೋಲೀಸ್ ಠಾಣೆ .
ಚಾಮರಾಜನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

## ಆದೇಶ

ಅರ್ಜಿದಾರರು ಸನ್ನಿಧಿ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ, 2023 ಕಲಂ 482 ರಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರರ ವಿರುದ್ಧ ಎದುರುದಾರರು ಭಾರತೀಯ ನ್ಯಾಯ ಸಂಹಿತೆ 2023 ಕಲಂ.115(1),

118(1), 351(1), 352 ರ ಅಡಿಯಲ್ಲಿ ಗುನ್ನಾ ಸಂಖ್ಯೆ 62/2026 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

**2. ಕೇಸಿನ ವಿಧ್ಯಮಾನಗಳ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕ:28.02.2026 ರಂದು ಮದ್ಯಾಹ್ನ 1.45 ಗಂಟೆ ಸಮಯದಲ್ಲಿ ಪಿರ್ಯಾದಿಯವರು ನೀಡಿದ ದೂರಿನಂತೆ, " ಪಿರ್ಯಾದಿಯವರ ಜಮೀನು ಮತ್ತು ಹಂಗಳ ಗ್ರಾಮದ ಜಡೇಸ್ವಾಮಿಗಳ ಜಮೀನು ಅಕ್ಕಪಕ್ಕದ ಜಮೀನಾಗಿದ್ದು, ಜಡೇಸ್ವಾಮಿಗಳು ತಮ್ಮ ಜಮೀನನ್ನು ಸೋಲಾರ್ ಪ್ಲಾಂಟಿ ನೀಡಿರುತ್ತಾರೆ. ಆದರೆ ಸೋಲಾರ್ ಪ್ಲಾಂಟ್ ಜಮೀನಿನಲ್ಲಿ ಗ್ರಾಮಸ್ಥರುಗಳಿಗೆ ಸ್ಮಶಾನಕ್ಕೆ ದಾರಿ ಬಿಡಲು ತೀರ್ಮಾನವಾಗಿತ್ತು. ಜಡೇಸ್ವಾಮಿಗಳು ಸಹ ದಾರಿ ಬಿಡಿಲು ಒಪ್ಪಿಕೊಂಡಿದ್ದು, ಆದರೆ ಜಡೇಸ್ವಾಮಿಗಳು ದಾರಿ ಬಿಡದೇ ಸಂಪೂರ್ಣ ಜಮೀನಿಗೆ ಕಾಂಪೌಂಡ್ ಹಾಕಿಸಲು ತಯಾರಿ ನಡೆಸಿದ್ದರು. ದಿನಾಂಕ:26.02.2026 ರಂದು ಮದ್ಯಾಹ್ನ 1.00 ಗಂಟೆ ಸಮಯದಲ್ಲಿ ನಾನು ಜಮೀನಿನಲ್ಲಿದ್ದಾಗ ಮೇಲ್ಕಂಡ ಪ್ರಕಾಶ್ ಎಂಬ ವ್ಯಕ್ತಿಯು ನಾನು ಇಂಜಿನಿಯರ್ ಜೊತೆ ಮಾತನಾಡುತ್ತಿದ್ದಾಗ ನನ್ನನ್ನು ಬೋಳಿಮಗನೆ ನೀನು ನಮ್ಮ ವಿಚಾರವಾಗಿ ಮಾತನಾಡುತ್ತಿರುವುದು ಎಂದು ಏಕಾಏಕಿ ಸೋಲಾರ್ ಕಬ್ಬಿಣದ ಪಟ್ಟಿಯಿಂದ ನನ್ನ ತಲೆಗೆ ಹೊಡೆದು ನಿನ್ನನ್ನು ಕೊಲೆ ಮಾಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ ನನ್ನನ್ನು ಹಿಡಿದು ಎಳೆದಾಡಿದಾಗ ಸ್ಥಳದಲ್ಲಿದ್ದ ಇಂಜಿನಿಯರ್ ವೃಷಬೇಂದ್ರ ರವರು ನಿನ್ನ ಬಗ್ಗೆ ಮಾತನಾಡಿಲ್ಲ. ಆತನಿಗೆ ಹೊಡೆಯಬೇಡ ಎಂದು ಹೇಳಿದರೂ ಸಹ ಕೇಳದೇ ಕಬ್ಬಿಣದ ಪಟ್ಟಿಯಿಂದ ನನ್ನ ತಲೆಗೆ ಹೊಡೆದು ನೋವುಂಟು ಮಾಡಿದನು ಅಷ್ಟಕ್ಕೆ ಪಕ್ಕದಲ್ಲಿದ್ದವರು ಬಂದು ಜಗಳ ಬಿಡಿಸಿದರು, ನಂತರ ಗಾಯಗೊಂಡಿದ್ದ ನನ್ನನ್ನು ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಿಸಿದರು ಎಂಬುದಾಗಿರುತ್ತದೆ.

3. ಈ ಪ್ರಕರಣದಲ್ಲಿ ಅರ್ಜಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ ಎದುರುದಾರ ಪೋಲಿಸರು ಅರೋಪಿಸಿರುವಂತೆ ಅರ್ಜಿದಾರರು ಯಾವುದೇ ರೀತಿಯ ಅಪರಾಧವನ್ನು ಮಾಡಿರುವುದಿಲ್ಲ. ಈ ಪ್ರಕರಣಕೂ ಅರ್ಜಿದಾರರಿಗೂ ಯಾವುದೇ ಸಂಬಂದವಿರುವುದಿಲ್ಲ. ಅರ್ಜಿದಾರರ ವಿರುದ್ಧ ಇರುವ ಅಪರಾಧಗಳು ಮರಣದಂಡನೆ ಅಥವಾ ಜೀವವಾಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ. ಈ ಕಾರಣದಿಂದ ಅರ್ಜಿದಾರರಿಗೆ ಷರತ್ತುಬದ್ಧ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡಿಕೊಡಬೇಕೆಂದು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುತ್ತಾರೆ. ಅರ್ಜಿದಾರರು ಜಾಮೀನು ಪಡೆದ ನಂತರ ಅಭಿಯೋಜನಾ

ಸಾಕ್ಷಿದಾರರನ್ನು ಎದರಿಸುವ ಅಥವಾ ಬೆದರಿಕೆ ಹಾಕುವ ಯಾವುದೇ ಕೆಲಸ ಮಾಡುವುದಿಲ್ಲ ಎಂಬ ಭರವಸೆಯನ್ನು ನೀಡುತ್ತಾರೆ.. ಅರ್ಜಿದಾರರು ಈ ಘನ ನ್ಯಾಯಾಲಯವು ವಿಧಿಸುವ ಯಾವುದೇ ಷರತ್ತುಗಳಿಗೆ ಬದ್ದರಾಗಿರುವುದಾಗಿಯೂ ಮತ್ತು ಈ ಘನ ನ್ಯಾಯಾಲಯವು ಸೂಚಿಸುವ ಜಾಮೀನುದಾರರನ್ನು ನೀಡಲು ಬದ್ಧರಾಗಿರುತ್ತಾರೆ. ಈ ಪ್ರಕರಣದಲ್ಲಿ ಅರ್ಜಿದಾರರುಗಳು ತನಿಖಾಧಿಕಾರಿಗಳ ಮುಂದೆ ಮತ್ತು ವಿಚಾರಣೆ ನ್ಯಾಯಾಲಯದಲ್ಲಿ ತಪ್ಪದೇ ಹಾಜರಾಗುವುದಾಗಿ ಈ ಘನ ನ್ಯಾಯಾಲಯದಲ್ಲಿ ಭರವಸೆಯನ್ನು ನೀಡುತ್ತಾರೆ. ಆದುದರಿಂದ ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

4. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರು ಆರೋಪಿತರ ಜಾಮೀನು ಅರ್ಜಿಗೆ ತಮ್ಮ ವಿವರವಾದ ತಕರಾರುಗಳನ್ನು ಸಲ್ಲಿಸಿದ್ದು ಈ ಕೇಸಿನ ವಿಧ್ಯಮಾನಗಳನ್ನು ಹೇಳಿ, ಸದರಿ ಪ್ರಕರಣದಲ್ಲಿ ಅರ್ಜಿದಾರ/ಆರೋಪಿತರು ಕೃತ್ಯ ನಡೆದಾಗಿನಿಂದಲೂ ತಲೆ ಮರೆಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಇವರುಗಳನ್ನು ದಸ್ತಗಿರಿ ಮಾಡಿ ತನಿಖೆಗೆ ಒಳಪಡಿಸಬೇಕಾಗಿರುತ್ತದೆ. ಇವರುಗಳು ಮಾನ್ಯ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿದಾರ/ಆರೋಪಿತರ ವಿರುದ್ಧ ಆಪಾಧನೆಗಳು ಗಂಭೀರ ಸ್ವರೂಪದ್ದಾಗಿದ್ದು, ಜಾಮೀನು ರಹಿತವಾಗಿದ್ದು, ಜೀವಾವಧಿ ಶಿಕ್ಷೆ ಅಥವಾ ದಂಡವನ್ನು ವಿಧಿಸಬಹುದಾಗಿರುತ್ತದೆ. ಅರ್ಜಿದಾರ/ಆರೋಪಿತರಿಗೆ ನಿರೀಕ್ಷಣಾ ಜಾಮೀನು ನೀಡಿದಲ್ಲಿ ಅವರು ತಲೆ ಮರೆಸಿಕೊಂಡು ಪರಾರಿಯಾಗುವ ಎಲ್ಲಾ ಸಾಧ್ಯತೆಗಳಿರುತ್ತವೆ. ಅರ್ಜಿದಾರ/ಆರೋಪಿತರು ತಮ್ಮ ನಿರೀಕ್ಷಣಾ ಜಾಮೀನು ಅರ್ಜಿಯಲ್ಲಿ ಕಾಣಿಸಿರುವಂತಹ ಎಲ್ಲಾ ಕಾರಣಗಳು ಸತ್ಯಕ್ಕೆ ದೂರವಾಗಿದ್ದು, ಅವುಗಳನ್ನು ಕೇವಲ ತಮ್ಮನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸೃಷ್ಟಿಸಿದಂತಹ ಸುಳ್ಳು ಕಾರಣಗಳಾಗಿದ್ದು, ಸದರಿ ಕಾರಣಗಳನ್ನು ಅಭಿಯೋಜನಾ ಪಕ್ಷವು ಖಡಾಖಂಡಿತವಾಗಿ ನಿರಾಕರಿಸುತ್ತದೆ. ಅರ್ಜಿದಾರ/ಆರೋಪಿತರು ನಿರಪರಾಧಿ ಎನ್ನುವುದು ನಿಜವಿರುವುದಿಲ್ಲ. ಆದುದರಿಂದ ಆರೋಪಿತರ ನಿರೀಕ್ಷಣಾ ಜಾಮೀನು ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಸದರಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

5. ಉಭಯೇತರ ವಾದಗಳನ್ನು ಆಲಿಸಲಾಯಿತು.

6. ಪ್ರಕರಣದ ತೀರ್ಮಾನಕ್ಕಾಗಿ ಈ ಕೆಳಕಂಡ ವಿಷಯಗಳನ್ನು ಗಣನೆಗೆ ತಗೆದುಕೊಳ್ಳಲಾಯಿತು.

1. ಆರೋಪಿತರು/ ಅರ್ಜಿದಾರರು ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರು ಎಂಬುದನ್ನು ಸಕಾರಣಗಳ ಮೂಲಕ ಸಾಭೀತುಪಡಿಸುವರೇ ?

2, ಏನು ಆದೇಶ ?

7. ಮೇಲ್ಕಂಡ ಪ್ರಶ್ನೆಗಳಿಗೆ ಈ ಕೆಳಂಡಂತೆ ಉತ್ತರಃ

ಅಂಶ ಸಂಖ್ಯೆ 1: ಸಕಾರಾತ್ಮಕವಾಗಿ

ಅಂಶ ಸಂಖ್ಯೆ 2: ಈ ಕೆಳಕಂಡ ಅಂತಿಮ ಆದೇಶದಂತೆಃ

## ಕಾರಣಗಳು

**8. ಅಂಶ ಸಂಖ್ಯೆ 1: ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಅರ್ಜಿದಾರರ ವಿರುದ್ಧ ಎದುರುದಾರರು ಭಾರತೀಯ ನ್ಯಾಯ ಸಂಹಿತೆ 2023 ಕಲಂ.115(1), 118(1), 351(1), 352 ರ ಅಡಿಯಲ್ಲಿ ಗುನ್ನಾ ಸಂಖ್ಯೆ 62/2026 ರಂತೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

9. ಪಿರ್ಯಾದುದಾರರು ನೀಡಿದ ದೂರಿನ ಪ್ರಕಾರ ದಿನಾಂಕ: 26.02.2026 ರಂದು ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಆರೋಪಿತನು ಪಿರ್ಯಾದುದಾರರೊಂದಿಗೆ ಜಗಳವಾಡಿ, ಕಬ್ಬಿಣದ ಪಟ್ಟಿಯಿಂದ ತಲೆಗೆ ಹೊಡೆದು ಗಾಯಪಡಿಸಿದನು ಹಾಗೂ ಕೊಲೆ ಬೆದರಿಕೆ ಹಾಕಿದನು ಎಂಬ ಆರೋಪವಿದೆ. ಪ್ರಕರಣದ ಸ್ವಭಾವ, ಗಾಯದ ಗಂಭೀರತೆ, ಹಾಗೂ ಎರಡೂ ಪಕ್ಷಗಳ ನಡುವಿನ ಜಮೀನು ಸಂಬಂಧಿತ ವಿವಾದದ ಹಿನ್ನೆಲೆಯನ್ನು ಪರಿಗಣಿಸಲಾಗಿದೆ.

ಅರ್ಜಿದಾರರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಅರ್ಜಿದಾರರು ತಾವು ನಿರಪರಾಧಿಗಳಾಗಿದ್ದು, ಸುಳ್ಳು ಆರೋಪಗಳಿಂದ ಈ ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ವಾದಿಸಿದ್ದಾರೆ. ಅರ್ಜಿದಾರರು ತನಿಖೆಗೆ ಸಹಕರಿಸಲು ಸಿದ್ಧರಾಗಿದ್ದು, ಸಾಕ್ಷ್ಯ ನಾಶ ಮಾಡುವ ಅಥವಾ ನ್ಯಾಯಾಲಯದ ವಿಚಾರಣೆಯಿಂದ ತಪ್ಪಿಸಿಕೊಳ್ಳುವ ಯಾವುದೇ ಉದ್ದೇಶವಿಲ್ಲವೆಂದು ತಿಳಿಸಿದ್ದಾರೆ.

ಸರ್ಕಾರಿ ಅಭಿಯೋಜಕರು ತಮ್ಮ ವಾದದಲ್ಲಿ ಆರೋಪಗಳು ಗಂಭೀರ ಸ್ವರೂಪದ್ದಾಗಿದ್ದು, ತನಿಖೆ ಪ್ರಾರಂಭಿಕ ಹಂತದಲ್ಲಿರುವುದರಿಂದ ಜಾಮೀನು ನೀಡಬಾರದೆಂದು ವಾದಿಸಿದ್ದಾರೆ.

ಈ ನ್ಯಾಯಾಲಯವು ಪಿರ್ಯಾದಿ, ಎಫ್‌ಐಆರ್, ಅರ್ಜಿದಾರರ ವಾದ ಹಾಗೂ ಪ್ರತಿವಾದಿ ರಾಜ್ಯದ ವಾದಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಕಂಡು ಬಂದ ಅಂಶವೇನೆಂದರೆ ಆರೋಪಗಳು ವಿಚಾರಣೆಗೆ ಒಳಪಡುವಂತಹವುಗಳಾಗಿದ್ದು, ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಪಾತ್ರವಾಗುವಂತಹ ಅಪರಾಧಗಳಲ್ಲ. ಅರ್ಜಿದಾರರು ಶಾಶ್ವತ ನಿವಾಸಿಗಳಾಗಿದ್ದು, ನ್ಯಾಯಾಲಯದ

ಪ್ರಕ್ರಿಯೆಯಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಕಂಡುಬರುವುದಿಲ್ಲ. ನಿರೀಕ್ಷಣಾ ಜಾಮೀನು ನೀಡುವುದರಿಂದ ತನಿಖೆಗೆ ಗಂಭೀರ ಅಡ್ಡಿ ಉಂಟಾಗುತ್ತದೆ ಎಂಬುದಕ್ಕೆ ಈ ಹಂತದಲ್ಲಿ ಸ್ಪಷ್ಟವಾದ ಆಧಾರಗಳು ಲಭ್ಯವಿಲ್ಲ. ಆದ್ದರಿಂದ, ನ್ಯಾಯಸಮ್ಮತವಾಗಿ ಷರತ್ತುಗಳನ್ನು ವಿಧಿಸಿ ನಿರೀಕ್ಷಣಾ ಜಾಮೀನು ನೀಡಬಹುದೆಂದು ಈ ನ್ಯಾಯಾಲಯ ಅಭಿಪ್ರಾಯಪಡುತ್ತದೆ. ಆದ್ದರಿಂದ 1ನೇ ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದು ಇರುತ್ತದೆ.

**10. ಅಂಶ ಸಂಖ್ಯೆ 2ಕ್ಕೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯಃ**

ಮೇಲೆ ಹೇಳಿದ ಎಲ್ಲಾ ಅಂಶಗಳನ್ನು ಚರ್ಚಿಸಿದ ನಂತರ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

## ಆದೇಶ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಿದೆ.

ಅರ್ಜಿದಾರರು/ ಆರೋಪಿತರನ್ನು ಒಂದು ವೇಳೆ ಎದುರುದಾರರು ಗುನ್ನಾ ಸಂಖ್ಯೆ 62/2026 ರಡಿಯಲ್ಲಿ ದಸ್ತಗಿರಿ ಮಾಡಿದ್ದಲ್ಲಿ ಅವರಿಂದ ರೂ.1,00,000/-ಗಳ ವೈಯಕ್ತಿಕ ಬಾಂಡ್ ಹಾಗೂ ಅಷ್ಟೇ ಮೊತ್ತದ ಒಂದು ಜಾಮೀನುದಾರರನ್ನು ಪಡೆದುಕೊಂಡು ತಕ್ಷಣ ಜಾಮೀನಿನ ಮೇಲೆ ಬಿಡುಗಡೆಗೊಳಿಸತಕ್ಕದ್ದು. ಅರ್ಜಿದಾರರು/ಆರೋಪಿತರು ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

1. ಅರ್ಜಿದಾರರು/ ಆರೋಪಿತರು ಇಂದಿನಿಂದ 10 ದಿನಗಳ ಒಳಗಾಗಿ ಎದುರುದಾರರ ಮುಂದೆ ಹಾಜರಾಗತಕ್ಕದ್ದು.

2. ಅರ್ಜಿದಾರರು/ ಆರೋಪಿತರು ಯಾವುದೇ ಕಾರಣಕ್ಕೂ ಅಭಿಯೋಜನೆ ಸಾಕ್ಷಿಗಳನ್ನು ತಿರುಚತಕ್ಕದ್ದಲ್ಲ.

3. ಅರ್ಜಿದಾರರು/ ಆರೋಪಿತರು ತನಿಖಾಧಿಕಾರಿಗೆ ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.

4. ಅರ್ಜಿದಾರರು/ಆರೋಪಿತರು ನ್ಯಾಯಾಲಯದ ವಿಚಾರಣೆಗೆ ಎಲ್ಲಾ ಸಹಕಾರಗಳನ್ನು ನೀಡತಕ್ಕದ್ದು.

5. ಅರ್ಜಿದಾರರು/ ಆರೋಪಿತರು ಮೇಲ್ಕಂಡ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಸದರಿ ಜಾಮೀನು ಆದೇಶ ತಕ್ಷಣದಲ್ಲಿ ರದ್ದುಗೊಳ್ಳುತ್ತದೆ.

( ಗ್ರೇಡ್‌-1 ಶೀಘ್ರಲಿಗಾರರಿಗೆ ಕಂಪ್ಯೂಟರ್ ಮೂಲಕ ಉಕ್ತಲೇಖನ ನೀಡಿದ್ದು, ಬೆರಳಚ್ಚು ಮಾಡಿದ್ದು, ತಿದ್ದುಪಡಿ ಮಾಡಿ ಪುನಃ ತೆರೆದ ನ್ಯಾಯಾಲಯದಲ್ಲಿ ಘೋಷಣೆಯನ್ನು ದಿನಾಂಕ 23.03.2026 ರಂದು ಮಾಡಿರುತ್ತೇನೆ)

**( ಪ್ರಭಾವತಿ .ಜಿ)**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಾಮರಾಜನಗರ.